**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:** ವಾಣಿಜ್ಯ ಬೆಳೆಯಾದ ಮಾವು ಈ ಬಾರಿ ಕೋಲಾರ ಜಿಲ್ಲೆಯಲ್ಲಿ ಉತ್ತಮ ಫಸಲು ಬಂದಿದ್ದರೂ ಬೆಳೆಗೆ ತಕ್ಕಂತೆ ಬೆಲೆ ಸಿಗದೆ ತೋಟದಲ್ಲೇ ಹಣ್ಣಾಗಿ ಕೊಳೆಯುವಂತಾಗಿದೆ. ಬೆಂಬಲ ಬೆಲೆಗೆ ಒತ್ತಾಯಿಸಿ ಹಲವು ಹೋರಾಟಗಳ ನಂತರ ಎಚ್ಚೆತ್ತ ರಾಜ್ಯ ಸರ್ಕಾರವು ಕೇಂದ್ರ ಸರಕಾರದ ಗಮನಕ್ಕೆ ತಂದಿತ್ತು. ಈಗ ಎಪಿಎಂಸಿ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಕ ಖರೀದಿಗೆ ಮುಂದಾಗಿದೆ. ಇಲ್ಲಿ ಅಳವಡಿಸಿರುವ ನಿಯಮಗಳೇ ಬೆಳೆಗಾರರಿಗೆ ಇಕ್ಕಟ್ಟು ತಂದಿದೆ. ಕೇಂದ್ರ ಸರ್ಕಾರ ಮಾವು ಬೆಳೆಗಾರರಿಗೆ ಬೆಂಬಲ ಬೆಲೆ ನೀಡಲು ಮಾವು ಅಭಿವೃದ್ಧಿ ಮಂಡಳಿಗೆ 100 ಕೋಟಿ ರೂ. ಬಿಡುಗಡೆ ಮಾಡಿ, ತದನಂತರ ಶೇ.50 ಮೊತ್ತವನ್ನು ಕೇಂದ್ರ ಸರ್ಕಾರದಿಂದ ಮರುಪಾವತಿ ಪಡೆಯಲು ಷರತ್ತುಗಳನ್ನು ವಿಧಿಸಿದೆ. ಇದನ್ನು ಪೂರೈಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ರೈತರಿರುವುದರಿಂದ ಈ ವಿಷಯವನ್ನು ಮಾನ್ಯ ತೋಟಗಾರಿಕೆ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:** ರಾಜ್ಯದ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಇತರೆ ಜಿಲ್ಲೆಗಳಲ್ಲಿ ಮಾವು ಪ್ರಮುಖ ಬೆಳೆಯಾಗಿದ್ದು, 2025-26ನೇ ಸಾಲಿನಲ್ಲಿ 1.39 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯನ್ನು ಬೆಳೆಯಲಾಗುತ್ತಿದ್ದು, 10 ಲಕ್ಷ ಮೆಟ್ರಿಕ್ ಟನ್ ಮಾವು ಉತ್ಪಾದನೆ ಅಂದಾಜಿಸಲಾಗಿರುತ್ತದೆ.

ಮಾವು ಬೆಳೆಯು ಒಂದೇ ಬಾರಿಗೆ ಕಟಾವಿಗೆ ಬಂದು ಅತೀ ಶೀಘ್ರವಾಗಿ ಹಾಳಾಗುವ ಗುಣ ಹೊಂದಿದೆ. ಕೋಲಾರ ಜಿಲ್ಲೆಯಲ್ಲಿ, ಮಾವು ಬೆಳೆಯನ್ನು 44,717 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಈ ಪೈಕಿ 31,300 ಹೆಕ್ಟೇರ್ ಪ್ರದೇಶದಲ್ಲಿ ತೋತಾಪುರಿ ತಳಿಯನ್ನು ಹಾಗೂ ಉಳಿದ 13,417 ಹೆಕ್ಟೇರ್ ಪ್ರದೇಶದಲ್ಲಿ ಇತರೆ ತಳಿಗಳನ್ನು ಬೆಳೆಯಲಾಗುತ್ತಿದೆ. ತೋತಾಪುರಿ ತಳಿಯಿಂದ ಶೇ.60 ರಷ್ಟು ಹಾಗೂ ಇತರೆ ತಳಿಗಳಿಂದ ಶೇ.40 ರಷ್ಟು ಇಳುವರಿ ಅಂದಾಜು ಮಾಡಿದ್ದು, ಒಟ್ಟು 2,70,853 ಟನ್ ಇಳುವರಿ ಅಂದಾಜು ಮಾಡಲಾಗಿದೆ. ಕರ್ನಾಟಕದ ತೋತಾಪುರಿ ಮಾವಿನ ಹಣ್ಣುಗಳನ್ನು ಹೆಚ್ಚಾಗಿ ತಿರುಳು ತೆಗೆಯುವ ಸಂಸ್ಕರಣಾ ಘಟಕಗಳಲ್ಲಿ ಬಳಸಲಾಗುತ್ತಿದೆ. ಇದರಿಂದ ಮಾವಿನ ಹಣ್ಣಿನ ಬೆಲೆ ನಿಯಂತ್ರಣಕ್ಕೆ ನೆರವಾಗಲಿದೆ. ಬಹಳಷ್ಟು ಮಾವಿನ ಫಸಲು ಹೊರ ರಾಜ್ಯವಾದ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಸಂಸ್ಕರಣಾ ಘಟಕಗಳಿಗೆ ಸರಬರಾಜು ಆಗುತ್ತದೆ. ಆದರೆ ಆಂಧ್ರ ಪ್ರದೇಶದಲ್ಲಿರುವ ಸಂಸ್ಕರಣಾ ಘಟಕಗಳಿಗೆ ಅವರಲ್ಲಿಯೇ ಅಗತ್ಯವಿರುವ ಮಾವು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದನೆಯಾದ ಕಾರಣ ಈ ಸಾಲಿನಲ್ಲಿ ಆಂಧ್ರ ಪ್ರದೇಶದ ಮಾವು ಸಂಸ್ಕರಣಾ ಘಟಕಗಳಿಗೆ ಹೋಗುತ್ತಿದ್ದ ನಮ್ಮ ರಾಜ್ಯದ ಮಾವಿನ ಹಣ್ಣಿನ ಮೇಲೆ ನಿರ್ಬಂಧ ಹೇರಿದ ಹಿನ್ನೆಲೆಯಲ್ಲಿ, ಬೆಲೆ ಕುಸಿತಕ್ಕೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ, ಕೇಂದ್ರ ಸರ್ಕಾರವು ಗರಿಷ್ಠ 2,50,000 ಮೆಟ್ರಿಕ್ ಟನ್ ಪ್ರಮಾಣದ ಮಾವನ್ನು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯ ಬೆಲೆ ವ್ಯತ್ಯಾಸ ಪಾವತಿ (Price Deficiency Payment Scheme-PDPS) ಯೋಜನೆಯಡಿಯಲ್ಲಿ ಖರೀದಿಸಲು ಹಾಗೂ ಮಾರುಕಟ್ಟೆ ಮಧ್ಯ ಪ್ರವೇಶ ದರ (MIP) ರೂ.1,616/- ಗಳಂತೆ ಪ್ರತಿ ಕ್ವಿಂಟಾಲ್ ಗೆ ನಿಗಧಿಪಡಿಸಿ ಸದರಿ ಯೋಜನೆಯಡಿಯಲ್ಲಿ ನಷ್ಟ ಸಂಭವಿಸಿದಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ 50:50 ಅನುಪಾತದಲ್ಲಿ ಭರಿಸಲು ಅನುಮೋದನೆ ನೀಡಲಾಗಿರುತ್ತದೆ. ನಿಯಮಗಳಲ್ಲಿ ಪ್ರತಿ ಎಕರೆಗೆ 20 ಕ್ವಿಂಟಾಲ್‌ನಂತೆ 5 ಎಕರೆಗೆ ಪ್ರತಿ

ರೈತರಿಂದ ಗರಿಷ್ಟ 100 ಕ್ವಿಂಟಾಲ್‌ವರೆಗೆ ಮಿತಿಗೊಳಿಸಲಾಗಿತ್ತು. ಇದರಿಂದ ಬೆಳೆಗಾರರಿಗೆ ತೊಂದರೆ ಆಗುವುದನ್ನು ಪರಿಗಣಿಸಿ ಪ್ರತಿ ಎಕರೆಗೆ 20 ಕ್ವಿಂಟಾಲ್‌ನಿಂದ 40 ಕ್ವಿಂಟಾಲ್‌ಗೆ ಹೆಚ್ಚಿಸಲಾಗಿದ. ಮತ್ತು ಪ್ರತಿ ರೈತರಿಂದ 100 ಕ್ವಿಂಟಾಲ್‌ನಿಂದ 200 ಕ್ವಿಂಟಾಲ್‌ವರೆಗೆ ಹೆಚ್ಚಿಸಲಾಗಿದೆ.

ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯ ಬೆಲೆ ವ್ಯತ್ಯಾಸ ಪಾವತಿ (Price Deficiency Payment Scheme-PDPS) ಯೋಜನೆಯಡಿ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ತಗಲುವ ಅಂದಾಜು ವೆಚ್ಚ ರೂ.101 ಕೋಟಿಗಳನ್ನು ಆವರ್ತನಿಧಿಯಿಂದ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮಾರುಕಟ್ಟೆ ನಿಗಮ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಆದೇಶಿಸಲಾಗಿರುತ್ತದೆ.

ಸದರಿ ಯೋಜನೆಯಡಿ **ದಿನಾಂಕ:27.06.2025 ರಿಂದ 26.07.2025ರ ಅವಧಿಯಲ್ಲಿ** ಮಾವು ಖರೀದಿ ಪ್ರಕ್ರಿಯೆಯನ್ನು ರಾಜ್ಯದ 7 APMC ಕೇಂದ್ರಗಳಲ್ಲಿ ಮಾಡಲಾಗಿರುತ್ತದೆ. ಒಟ್ಟು **16,270** ನೋಂದಾಯಿತ ರೈತರ ಪೈಕಿ, 14,993 ರೈತರಿಂದ **ರೂ.41.35 ಕೋಟಿ** ಮೌಲ್ಯದ **10,23,541** ಕ್ವಿಂಟಾಲ್ ಪ್ರಮಾಣದ ಮಾವು ಖರೀದಿ ಮಾಡಲಾಗಿರುತ್ತದೆ. ಈವರೆಗೆ **1,578** ರೈತರಿಗೆ ರೂ. 3,03,80,077/-ಗಳ ಮೊತ್ತವನ್ನು ಡಿ.ಬಿ.ಟಿ ಮೂಲಕ ಪಾವತಿಸಲಾಗಿದ್ದು ಹಣ ಪಾವತಿ ಪ್ರಗತಿಯಲ್ಲಿದೆ.

ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಮಾವು ಬೆಳೆಗೆ ಅಧಿಸೂಚನೆಯಾಗಿದ್ದು 2024-25ನೇ ಸಾಲಿನಲ್ಲಿ 33,314 ರೈತರ ಪ್ರಕರಣಗಳು 185.20 ಕೋಟಿಗಳ ವಿಮಾಮೊತ್ತ ಪರಿಹಾರಕ್ಕಾಗಿ ನೋಂದಾಯಿಸಿರುತ್ತಾರೆ. ಅರ್ಜಿಗಳ ಪರಿಶೀಲನೆ ಪ್ರಗತಿಯಲ್ಲಿದೆ.

HORTI 371 HGM 2025(E)

**(ಎಸ್. ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು